**ದಿಃ06.02.2026 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲುಃ 3ನೇ ಎದುರುದಾರರ ಪರ ಶ್ರೀ.ಎಂ.ಸಿ.ಎಂ ವಕೀಲರಿಂದ ಃ**

ಅಪಘಾತ ಕಾಲಕ್ಕೆ ಅಪಾಧಿತ ವಾಹನ ಎದುರುಗಡೆಯಿಂದ ಬಂದು ಡಿಕ್ಕಿ ಹೊಡೆಸಿತು. ಅಪಘಾತ ದಿನದಂದೆ ನಾನು ಚಿಕಿತ್ಸೆಗೆ ಆಸ್ಪತ್ರೆಗೆ ಹೋದೆ. ಅಪಘಾತ ದಿನದಂತೆ ಪೊಲೀಸರಿಗೆ ದೂರು ಕೊಟ್ಟರಾ ಎಂದರೆ ಸಾಕ್ಷಿ ನನಗೆ ತುಂಬಾ ನೋವು ಆಗಿದ್ದರಿಂದ ಎರಡು ದಿನ ನಂತರ ಪೊಲೀಸರಿಗೆ ದೂರು ಕೊಟ್ಟಿದ್ದೇನೆ ಎನ್ನುತ್ತಾರೆ. ಅಪಘಾತ ಪಡಿಸಿದ ವಾಹನ ಸ್ಥಳದಲ್ಲಿ ನಿಲ್ಲಿಸದೇ ಹೋಗಿದದರಿಂದ ಯಾವ ವಾಹನ ಅಪಘಾತ ಪಡಿಸಿದೆ ಎಂದು ಗುರುತು ಇಲ್ಲದೇ ತಡವಾಗಿ ದೂರು ಕೊಟ್ಟಿದ್ದೇನೆ ಎಂದರೆ ಸರಿ. ದಿಃ09.11.2024 ರಂದು ನನಗೆ ಅಪಘಾತ ಆಗಿಲ್ಲ ಎಂದರೆ ಸರಿಯಲ್ಲ. ನಾನು ದಿಃ12.11.2024 ರಂದು ಪೊಲೀಸರಿಗೆ ದೂರು ಕೊಟ್ಟಿರುತ್ತೇನೆ ಎಂದರೆ ಸರಿ. ನನಗೆ ಬೇರೆ ವಾಹನದಿಂದ ಅಪಘಾತ ಸಂಭವಿಸಿದ್ದು ಆ ಅಪಘಾತ ಗುರುತು ಸಿಗದೇ ಇದಿದ್ದರಿಂದ ವಾಹನ ನೋಂದಣಿ ಸಂಖ್ಯೆ MEQ9573 ವಾಹನವನ್ನು ಸುಳ್ಳಾಗಿ ಈ ಅಪಘಾತದಲ್ಲಿ ಸೇರ್ಪಡೆ ಮಾಡಿ ಸುಳ್ಳಾಗಿ ದೂರು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಾನು ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾಗಿರಲಿಲ್ಲ. ಸಾಕ್ಷಿ ಮುಂದುವರೆದು ನಾನು ಆಸ್ಪತ್ರೆಯಲ್ಲಿ ಹೊರರೋಗಿಯಾಗಿ ಚಿಕಿತ್ಸೆ ಪಡೆದಿದ್ದೇನೆ. ನನಗೆ ಅಪಘಾತ ಗಾಯದಿಂದಾಗಿ

ಯಾವುದೆ ತೊಂದರೆ ಆಗಿಲ್ಲ ಆರೋಗ್ಯವಾಗಿದ್ದೇನೆ ಎಂದರೆ ಸರಿಯಲ್ಲ. ನನಗೆ ತಿಂಗಳಿಗೆ 25 ಸಾವಿರ ವರಮಾನ ಇತ್ತು ಎಂದು ತೋರಿಸಲು ನನ್ನ ಬಳಿ ಯಾವುದೇ ದಾಖಲೆ ಇಲ್ಲ. ನಾನು ಚಿಕಿತ್ಸೆಗಾಗಿ ಯಾವುದೇ ಖರ್ಚು ಮಾಡಿಲ್ಲ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಹಾಜರು ಮಾಡಿರುವ ಔಷಧಿ ಬಿಲ್ಲುಗಳು ನನ್ನ ಚಿಕಿತ್ಸೆಗೆ ಸಂಬಂಧಿಸಿದ್ದವು ಅಲ್ಲ ಎಂದರೆ ಸರಿಯಲ್ಲ. ಅವುಗಳನ್ನು ಈ ಕೇಸಿಗಾಗಿ ಸೃಷ್ಟಿಮಾಡಿ ಹಾಜರು ಮಾಡಿದ್ದೇನೆ ಎಂದರೆ ಸರಿಯಲ್ಲ. ನನಗೆ ಯಾವುದೇ ತೊಂದರೆ ಇಲ್ಲ. ಪರಿಹಾರ ಪಡೆಯಬೇಕೆಂಬ ಉದ್ದೇಶದಿಂದ ನಾನು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

ಸಹಿ/-

(ಸಿ. ವೀರಭದ್ರಯ್ಯ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಕೊಡಗು, ಮಡಿಕೇರಿ.